KACM010011242024

Presented on : 23-04-2024
Registered on : 23-04-2024

**IN THE COURT OF**
**PRL. DISTRICT AND SESSIONS JUDGE. CHIKKAMAGALURU**
**AT Chikkamagaluru,CHIKKAMAGALURU**
**(Presided Over by <u>RAJESHWARI N. HEGDE</u>)**

**<u>S.C (SESSION CASES)/42/2024</u>**

Complainant(PROSECUTION):
State by Sakharayapatna Police Station, Rep. by Public Prosecutor, Chikkamagaluru

**VERSUS**

Accused:
Vaggaiah, S/o Late Ningaiah, 50 yrs, Painter, R/o Banuru Village, Kadur Taluk, Chikkamagaluru Dist.

---------------------------------------------------------------------------
State Complainant}: Public Prosecutor, Chikkamagaluru,
Advocate for H.J.R. and K.R.V. appearing for Vaggaiah,

---------------------------------------------------------------------------
**Offence punishable under : 302 of INDIAN PENAL CODE,**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂ: 42/2024</u>

| | | |
|---|---|---|
| ಸಾಕ್ಷಿದಾರರ ಹೆಸರು | - ಸುನೀಲ್ ಆರ್ | ಪಿಡಬ್ಲ್ಯೂ -1 |
| ತಂದೆಯ ಹೆಸರು | - ರವಿನಾಯಕ್ | ಸಿಡಬ್ಲ್ಯೂ - 1 |
| ವಯಸ್ಸು | - 32 ವರ್ಷ | |
| ಉದ್ಯೋಗ | - ಫೈರ್ ಮ್ಯಾನ್ | |
| ವಾಸ ಸ್ಥಳ | - ಪ್ರಸ್ತುತ ಶಿವಮೊಗ್ಗ | |

(ಆರೋಪಿಯು ನ್ಯಾಯಾಂಗ ಬಂದನದಲ್ಲಿದ್ದು, ಆತನನ್ನು ಈ ದಿನ *jitsi app* ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು.)

ದಿನಾಂಕಃ 01.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ಮೃತ ಗೌರಿಬಾಯಿ ನನ್ನ ತಾಯಿ. ಈ ದಿನ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಹಾಜರುಪಡಿಸಿದ ಆರೋಪಿ ಗೊತ್ತು, ಆತ ಬಾಣೂರಿನ ವಾಸಿ ಮತ್ತು ನನ್ನ ತಂದೆಯ ಸ್ನೇಹಿತ. ನನ್ನ ತಂದೆ 2016 ನೇ ಇಸವಿಯಲ್ಲಿ ಮೃತಪಟ್ಟಿದ್ದಾರೆ . ಅಂದಿನಿಂದ ಆರೋಪಿ ನಮ್ಮ ಜಮೀನಿನ ಕೆಲಸಗಳನ್ನು ನೋಡಿಕೊಳ್ಳುತ್ತಾ ನಮ್ಮ ಮನೆಗೆ ಆಗಾಗ್ಗೆ ಬಂದು ಹೋಗಿ ಮಾಡುತ್ತಿದ್ದನು. ಚಾಸಾ.14 ನನ್ನ ಅಜ್ಜಿ. ಚಾಸಾ.15 ಮತ್ತು ಚಾಸಾ.18 ನನ್ನ ಅಕ್ಕಂದಿರು. ಚಾಸಾ.16 ನನಗೆ ಅತ್ತೆಯಾಗಬೇಕು. ಚಾಸಾ.19 ನನ್ನ ಭಾವ.

2. ನಮ್ಮ ತಂದೆ ತಾಯಿಗೆ ಒಟ್ಟು ಮೂರು ಜನ ಮಕ್ಕಳು. ಅವರೆಂದರೆ ಚಾಸಾ.15, ಚಾಸಾ.18 ಮತ್ತು ನಾನು. ನನಗೆ ಮದುವೆಯಾಗಿ ಇಬ್ಬರು ಮಕ್ಕಳಿದ್ದಾರೆ. ನಾನು ಬೆಂಗಳೂರಿನಲ್ಲಿ 2017 ನೇ ಇಸವಿಯಿಂದ ಅಗ್ನಿಶಾಮಕ ಮತ್ತು ತುರ್ತು ಸೇವೆ ಇಲಾಖೆಯಲ್ಲಿ ಕೆಲಸ ಮಾಡಿಕೊಂಡು ಅಲ್ಲಿಯೇ ವಾಸವಾಗಿದ್ದೆನು. ನನ್ನ ತಂದೆ 2016 ನೇ ಇಸವಿಯಲ್ಲಿ ಮೃತಪಟ್ಟಿದ್ದರು. ನನ್ನ ತಾಯಿ ಚಟ್ನಪಾಳ್ಯ ಗೇಟಿನಲ್ಲಿರುವ ನಮ್ಮ ಜಮೀನನ್ನು ನೋಡಿಕೊಂಡು ಅಗ್ರಹಾರ ತಾಂಡ್ಯದಲ್ಲಿರುವ ನಮ್ಮ ಮನೆಯಲ್ಲಿ ವಾಸವಾಗಿದ್ದರು. ಆರೋಪಿ ನನ್ನ ತಂದೆಯ ಸ್ನೇಹಿತನಾಗಿದ್ದು, ನನ್ನ ತಾಯಿಗೆ ಜಮೀನನ್ನು ನೋಡಿಕೊಳ್ಳಲು ಸಹಾಯ ಮಾಡಿಕೊಂಡು ನಮ್ಮ ಮನೆಗೆ ಆಗಾಗ್ಗೆ ಬಂದು ಹೋಗಿ ಮಾಡುತ್ತಿದ್ದನು.

3. ದಿನಾಂಕ 14.01.2024 ರಂದು ಬೆಳಿಗ್ಗೆ ಸುಮಾರು 6.30 ಗಂಟೆಗೆ ನನ್ನ ಅಜ್ಜಿಯಾದ ಚಾಸಾ.14 ಸಕ್ರಿಬಾಯಿ ರವರು ನನಗೆ ಫೋನ್ ಮಾಡಿ ಹಿಂದಿನ ದಿನ ರಾತ್ರಿ 10.30

ಗಂಟೆ ಸುಮಾರಿಗೆ ಆರೋಪಿ ಮತ್ತು ನಿಮ್ಮ ತಾಯಿ ಗಲಾಟೆ ಮಾಡಿಕೊಳ್ಳುತ್ತಿದ್ದಾಗಿ ಮತ್ತು ಅವರು ಆಂಜನೇಯ ಸ್ವಾಮಿ ದೇವಸ್ಥಾನದ ಕಡೆಗೆ ಹೋಗಿದ್ದಾಗಿ ನಂತರ ಬೆಳಿಗ್ಗೆ ನೋಡಿದಾಗ ನನ್ನ ತಾಯಿಯನ್ನು ಆಂಜನೇಯ ಸ್ವಾಮಿ ದೇವಸ್ಥಾನದ ಹತ್ತಿರ ಆರೋಪಿ ಕೊಲೆ ಮಾಡಿರುವುದಾಗಿ ತಿಳಿಸಿದರು.

4. ನಂತರ ನಾನು ಸದರಿ ವಿಚಾರವನ್ನು ಚಾಸಾ.15 ಮತ್ತು ಚಾಸಾ.18 ರವರಿಗೆ ತಿಳಿಸಿದೆನು. ಆ ಸಮಯದಲ್ಲಿ ಚಾಸಾ.15 ರವರು ಬೆಂಗಳೂರಿನಲ್ಲಿಯೇ ವಾಸವಾಗಿದ್ದರು. ಹಾಗಾಗಿ ನಾನು ಚಾಸಾ.15 ರವರನ್ನು ಕರೆದುಕೊಂಡು ಅಗ್ರಹಾರ ತಾಂಡ್ಯಕ್ಕೆ ಹೋದೆನು. ಅಲ್ಲಿಂದ ಆಂಜನೇಯ ಸ್ವಾಮಿ ದೇವಸ್ಥಾನದ ಹತ್ತಿರ ಹೋಗಿ ನೋಡಿದಾಗ ಅಲ್ಲಿ ನನ್ನ ತಾಯಿ ಮೃತಪಟ್ಟಿದ್ದರು. ಆಕೆಯ ಶವ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಇತ್ತು. ನಾನು ಅಲ್ಲಿಗೆ ಹೋದಾಗ ಬೆಳಿಗ್ಗೆ ಸುಮಾರು 11.00 ರಿಂದ 11.30 ಗಂಟೆಯಾಗಿತ್ತು. ನನ್ನ ತಾಯಿಯ ತಲೆಯ ಹಿಂಭಾಗದಲ್ಲಿ ತೀವ್ರವಾದ ಗಾಯವಾಗಿ ರಕ್ತ ಬಂದು ಹೆಪ್ಪುಗಟ್ಟಿತ್ತು. ಆಕೆಯ ಬೆನ್ನು ಮತ್ತು ಕೈ ಕಾಲುಗಳಲ್ಲಿ ಗಾಯವಾಗಿ ರಕ್ತ ಬಂದಿರುವುದು ಕಂಡು ಬಂತು.

5. ನಂತರ ಚಾಸಾ.19 ರವರು ನನ್ನ ಬಳಿ ಬಂದು ಹಿಂದಿನ ದಿನ ರಾತ್ರಿ ಆತ ಚಟ್ನಪಾಳ್ಯ ಸಮೀಪವಿರುವ ನಮ್ಮ ಅಡಿಕೆ ತೋಟಕ್ಕೆ ಹೋಗುವಾಗ ಊರಿನವರು ಆತನಿಗೆ ಫೋನ್ ಮಾಡಿ ಅಗ್ರಹಾರ ತಾಂಡ್ಯದಲ್ಲಿ ಆರೋಪಿ ಮತ್ತು ನಿಮ್ಮ ಅತ್ತೆ ಅಂದರೆ ನನ್ನ ತಾಯಿ ಜಗಳ ಮಾಡಿಕೊಳ್ಳುತ್ತಿದ್ದಾಗಿ ತಿಳಿಸಿದ್ದಾಗಿ ನಂತರ ಸದರಿ ವಿಚಾರವನ್ನು ಕೇಳಿ ಆತ ರಾತ್ರಿ ಸುಮಾರು 10.30 ಗಂಟೆಗೆ ಆತ ನನ್ನ ತಾಯಿಯನ್ನು ಮಾತನಾಡಿಸಲು ಆಕೆಯ ಮನೆಗೆ ಹೋದಾಗ ಅಲ್ಲಿ ನನ್ನ ತಾಯಿ ಇರಲಿಲ್ಲವೆಂದು ಅಕ್ಕಪಕ್ಕದವರನ್ನು ವಿಚಾರಿಸಿದಾಗ ಆಕೆ ಮತ್ತು ಆರೋಪಿ ಜಗಳವಾಡುತ್ತಾ ನಾಗೇನಹಳ್ಳಿಯ ಕಡೆಗೆ ನಡೆದುಕೊಂಡು ಹೋದರು ಎಂದು ತಿಳಿಸಿದ್ದಾಗಿ ನಂತರ ಆತ ಬೈಕಿನಲ್ಲಿ ನಾಗೇನಹಳ್ಳಿಯ ಕಡೆಗೆ ಹೋಗಿ ನೋಡಿದಾಗ ಆತನಿಗೆ ನನ್ನ ತಾಯಿ ಕಾಣಲಿಲ್ಲವೆಂದು ಆಗ ಆತ ನನ್ನ ತಾಯಿ ಅಲ್ಲಿಯೇ ದೇವಸ್ಥಾನದ ಹತ್ತಿರವಿದ್ದ ಆಕೆಯ ಅಕ್ಕನ ಮನೆಗೆ ಹೋಗಿರಬಹುದೆಂದು ತಿಳಿದು ಆತ ತನ್ನ ಜಮೀನಿನ ಹತ್ತಿರ ವಾಪಾಸ್ಸು ಹೋಗಿದ್ದಾಗಿ ತಿಳಿಸಿದರು.

6. ನನ್ನ ತಾಯಿ ಮೃತಪಡುವ 1 ವರ್ಷದ ಹಿಂದೆ ಆಕೆ ಬಿದ್ದು ಪೆಟ್ಟು ಮಾಡಿಕೊಂಡಿದ್ದರು. ಹಾಗಾಗಿ ಆಕೆಗೆ ಕೆಲಸಕ್ಕೆ ಹೋಗಲು ಆಗುತ್ತಿರಲಿಲ್ಲ ಆದ್ದರಿಂದ ಮನೆಯ ಖರ್ಚಿಗಾಗಿ ಆಕೆ ಆರೋಪಿಯಿಂದ ರೂ.4,000/- ಹಣವನ್ನು ಸಾಲವಾಗಿ ಪಡೆದುಕೊಂಡಿದ್ದಾಗಿ ಸದರಿ ಹಣವನ್ನು ವಸೂಲಿ ಮಾಡುವ ಸಲುವಾಗಿ ಆರೋಪಿ ಆಗಾಗ್ಗ ನಮ್ಮ ಮನೆಗೆ ಬಂದು ನನ್ನ ತಾಯಿಯೊಂದಿಗೆ ಗಲಾಟೆ ಮಾಡುತ್ತಿದ್ದುದ್ದಾಗಿ ನನ್ನ ತಾಯಿ ಮತ್ತು ನಮ್ಮ ಅಕ್ಕಪಕ್ಕದ ಮನೆಯವರು ನನಗೆ ತಿಳಿಸಿದ್ದರು.

7. ಅದೇ ವಿಚಾರದಲ್ಲಿ ಆರೋಪಿ ನನ್ನ ತಾಯಿಯನ್ನು ಆಂಜನೇಯ ಸ್ವಾಮಿ ದೇವಸ್ಥಾನದ ಹತ್ತಿರ ಕರೆದುಕೊಂಡು ಹೋಗಿ ಯಾವುದೋ ಆಯುಧದಿಂದ ಹೊಡೆದು ಕೊಲೆ ಮಾಡಿರುವುದಾಗಿ ತಿಳಿಸಿ ಆತನ ವಿರುದ್ಧ ಕ್ರಮ ಜರುಗಿಸುವಂತೆ ಅದೇ ದಿನ ಅಂದರೆ ದಿನಾಂಕ 14.01.2024 ರಂದು ಮಧ್ಯಾಹ್ನ 12.00 ಗಂಟೆಗೆ ಸಖರಾಯಪಟ್ಟಣ ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿದ್ದೇನೆ. ಸದರಿ ದೂರನ್ನು ನೋಡಿದರೆ ಗುರುತಿಸುತ್ತೇನೆ.

8. ಸಾಕ್ಷಿಯು ದೂರು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ದೂರನ್ನು ನಿಪಿ.1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಸದರಿ ದೂರಿನ ಮೇರೆಗೆ ಪೊಲೀಸರು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ಅದರ ಪ್ರತಿಯನ್ನು ನನಗೆ ನೀಡಿರುತ್ತಾರೆ. ಸಾಕ್ಷಿಯು ಪ್ರಥಮ ವರ್ತಮಾನ ವರದಿಯ ಕಲಂ 12 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಪ್ರಥಮ ವರ್ತಮಾನ ವರದಿಯನ್ನು ನಿಪಿ.2 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು.

9. ಸಾಕ್ಷಿಗೆ ಆರು ಫೋಟೋಗಳನ್ನು ತೋರಿಸಲಾಗಿ ಅವುಗಳಲ್ಲಿ ತನ್ನ ತಾಯಿ ಗೌರಿಬಾಯಿಯ ಶವ ಮತ್ತು ಆಕೆಯ ತಲೆ ಮತ್ತು ಬೆನ್ನಿನಲ್ಲಿ ಆದ ಗಾಯಗಳು ಕಂಡು ಬರುವುದಾಗಿ ಮತ್ತು ಅದು ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಇರುವುದು ಕಂಡು ಬರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಫೋಟೋಗಳನ್ನು ಕ್ರಮವಾಗಿ ನಿಪಿ.3 ರಿಂದ ನಿಪಿ.8 ಎಂದು ಗುರುತಿಸಲಾಯಿತು.

10. ಅದಾದ 2 ತಿಂಗಳ ಬಳಿಕ ಅಂದರೆ ದಿನಾಂಕ 18.03.2024 ರಂದು ಕಡೂರು ವೃತ್ತ ನಿರೀಕ್ಷಕರು ನನ್ನನ್ನು ಮತ್ತು ನನ್ನ ಅಕ್ಕನಾದ ಚಾಸಾ.15 ರವರನ್ನು ತಮ್ಮ ಕಛೇರಿಗೆ ಕರೆಸಿದ್ದರು. ಅಲ್ಲಿ ಅವರು ನಮಗೆ ಮೇಲೆ ಹೇಳಿದ ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ಅಳವಡಿಸಲಾಗಿದ್ದ ಸಿಸಿ ಕ್ಯಾಮೆರಾದ ಫೂಟೇಜನ್ನು ತೋರಿಸಿದರು. ಸದರಿ ಫೂಟೇಜ್ ನಲ್ಲಿ ಆರೋಪಿ ಮತ್ತು ನನ್ನ ತಾಯಿ ಓಡಾಡಿರುವ ಮತ್ತು ಆರೋಪಿ ನನ್ನ ತಾಯಿಗೆ ಹಲ್ಲೆ ಮಾಡಿರುವ ಚಿತ್ರಣವಿರುವುದು ಕಂಡು ಬಂತು.

(ಈ ಹಂತದಲ್ಲಿ ನ್ಯಾಯಾಲಯದ ಬೆಳಗಿನ ಕಲಾಪದ ಅವಧಿ ಮುಗಿದಿದ್ದರಿಂದ ಸಾಕ್ಷಿಯ ಮುಂದಿನ ಮುಖ್ಯ ವಿಚಾರಣೆಯನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)
ಓ.ಹೇ.ಕೇ.ಸ.ಇ.ಎ.ಒ.

Sd/-
(ಭಾನುಮತಿ ಬಿ.ಸಿ)
ಸಿ/ಸಿ ಪ್ರಧಾನ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ/-

ದಿನಾಂಕಃ 01.03.2025 ರಂದು ಮಧ್ಯಾಹ್ನ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಮುಂದುವರೆದ ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

11. ಸದರಿ ಸಿಸಿ ಕ್ಯಾಮೆರಾದಲ್ಲಿ ರೆಕಾರ್ಡ್ ಆಗಿದ್ದ ಫೂಟೇಜ್ ನಲ್ಲಿ ದಿನಾಂಕ 14.01.2024 ರಂದು ರಾತ್ರಿ 10.00 ಗಂಟೆ ಆರೋಪಿ ಮತ್ತು ನನ್ನ ತಾಯಿ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣಕ್ಕೆ ಹೋಗಿರುವುದು ಮತ್ತು ಮದ್ಯ ರಾತ್ರಿ ಅಂದರೆ ಬೆಳಗಿನ ಜಾವ 1.07 ನಿಮಿಷದವರೆಗೆ ದೇವಸ್ಥಾನದ ಆವರಣದಲ್ಲಿ ನನ್ನ ತಾಯಿ ಮತ್ತು ಆರೋಪಿ ಇಬ್ಬರು ಕುಳಿತು ಮಾತನಾಡುತ್ತಿರುವುದು, ಆರೋಪಿ ಒಂದು ಪೈಪನ್ನು ಕಾಲಿನಿಂದ ಹೊಡೆಯುತ್ತಾ ತಂದು ನನ್ನ ತಾಯಿಯ ತಲೆಗೆ, ಮೈ ಕೈಗೆ

ಹಲವಾರು ಬಾರಿ ಹಲ್ಲೆ ಮಾಡಿರುವುದು, ನನ್ನ ತಾಯಿ ಹೊಡೆತಗಳನ್ನು ತಡೆಯುತ್ತಾ ನೆಲದ ಮೇಲೆ ಮಲಗಿಕೊಂಡರೂ ಸಹ ಆರೋಪಿ ಬಿಡದೇ ಪೈಪ್ ತುಂಡಾಗಿದ್ದರಿಂದ ಒಂದು ಕಬ್ಬಿಣದ ರಾಡನ್ನು ತಂದು ಆಕೆಯ ಮೇಲೆ ಹಲ್ಲೆ ಮಾಡಿರುವುದು, ಆಕೆ ತಪ್ಪಿಸಿಕೊಂಡು ಹೋದಾಗ ಆರೋಪಿ ಅಲ್ಲಿಗೂ ಹೋಗಿ ಆಕೆಯ ಮೇಲೆ ಹಲ್ಲೆ ಮಾಡಿ, ಆಕೆಯನ್ನು ಕೊಲೆ ಮಾಡಿ ಮದ್ಯ ರಾತ್ರಿ 1.17 ಗಂಟೆಗೆ ಅಲ್ಲಿಂದ ಪರಾರಿಯಾಗಿರುವುದು ಕಂಡು ಬಂತು.

12. ಆ ಬಗ್ಗೆ ನಾನು ಪೊಲೀಸರಿಗೆ ಅದೇ ದಿನ ನನ್ನ ಮುಂದುವರೆದ ಹೇಳಿಕೆಯನ್ನು ನೀಡಿದ್ದೇನೆ. ಸದರಿ ಫೂಟೇಜನ್ನು ಈಗ ನೋಡಿದರೆ ಗುರುತಿಸುತ್ತೇನೆ.

13. ಸದರಿ ಫೂಟೇಜ್ ಇದೆ ಎಂದು ಹೇಳಲಾದ P ಎಂಬ ಅಕ್ಷರದಿಂದ ಸೀಲು ಮಾಡಲಾಗಿರುವ ಲಕೋಟೆಯಲ್ಲಿದ್ದ ಒಂದು ಪೆನ್ ಡ್ರೈವ್ ಅನ್ನು ಈ ದಿನ ಆರೋಪಿಯ ಸಮಕ್ಷಮ ತೆರೆದ ನ್ಯಾಯಾಲಯದಲ್ಲಿ ತೆಗೆದು ಅದರಲ್ಲಿದ್ದ ಪೆನ್ ಡ್ರೈವ್ ಅನ್ನು ತಂತ್ರಜ್ಞರ ಸಹಾಯದಿಂದ ಕಂಪ್ಯೂಟರ್ ಗೆ ಅಳವಡಿಸಿ ಅದರಲ್ಲಿದ್ದ ಫೂಟೇಜನ್ನು ಸಾಕ್ಷಿಗೆ ಪ್ಲೇ ಮಾಡಿ ತೋರಿಸಲಾಗಿ ಅದರಲ್ಲಿ ಕಂಡು ಬರುವ ಹೆಂಗಸನ್ನು ಸಾಕ್ಷಿಯು ತನ್ನ ತಾಯಿ ಗೌರಿಬಾಯಿ ಎಂದು ಮತ್ತು ಸದರಿ ಫೂಟೇಜ್ ನಲ್ಲಿ ಕಂಡು ಬರುವ ಗಂಡಸು ಈ ಪ್ರಕರಣದ ಆರೋಪಿಯಾದ ವಗ್ಗಯ್ಯ ಎಂದು ಗುರುತಿಸಿರುತ್ತಾರೆ ಮತ್ತು ಸದರಿ ಫೂಟೇಜ್ ನಲ್ಲಿ ಆರೋಪಿ ತನ್ನ ತಾಯಿಯೊಂದಿಗೆ ಜಗಳ ಮಾಡುತ್ತಾ ಆಕೆಯ ಮೇಲೆ ಪೈಪು ಮತ್ತು ಕಬ್ಬಿಣದ ರಾಡಿನಿಂದ ಹಲ್ಲೆ ಮಾಡಿರುವುದು ಕಂಡು ಬರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಫೂಟೇಜನ್ನು ಒಳಗೊಂಡ ಪೆನ್ ಡ್ರೈವ್ ಅನ್ನು ನಿಪಿ.9 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ</u>

(ಆರೋಪಿ ಪರ ವಕೀಲರು ಗೈರು ಹಾಜರಿದ್ದು, ಆರೋಪಿಯು ತನ್ನ ವಕೀಲರನ್ನು ಬದಲಿಸುವುದಾಗಿ ಹೇಳಿ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)
ಓ.ಹೇ.ಕೇ.ಸ.ಇ.ಎ.ಒ.

Sd/-
(ಭಾನುಮತಿ ಬಿ.ಸಿ)
ಸಿ/ಸಿ ಪ್ರಧಾನ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ/-

Visit **ecourts.gov.in** for updates or download mobile app “**eCourts Services**” from Android or iOS